# ಅಜ್ಞಾನಕ್ಕೆ ಬೇಕು ಜ್ಞಾನ ದೀವಿಗೆ



ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ ಕೈ ಹಿಡಿದು ನಡೆಸೆನ್ನನು ...
ಬಿ.ಎಂ.ಶ್ರೀ.ಯವರು ಕನ್ನಡಕ್ಕೆ ತಂದ ಈ ಗೀತೆಯನ್ನು ಹೇಳಹೇಳುತ್ತಲೇ ದೀಪ ಹಚ್ಚಿ ಕೆನ್ನೆ ಕೆನ್ನೆಗೆ ಹೊಡೆದುಕೊಂಡು ಪಾಪೋಹಂ ಪಾಪ ಕರ್ಮಾತ್ಮಾ...? ಎನ್ನುತ್ತಾ ಅಜ್ಞಾನದ ಅಂಧಕಾರಕ್ಕೆ ಜಾರುವುದು ನಮ್ಮ ಪರಂಪರೆ. ಈಗಿನ ಸ್ಥಿತಿ ಇದಕ್ಕಿಂತಲೂ ಭಿನ್ನವೇನಲ್ಲ. ಜಗದ ವಿಷಯಗಳನ್ನೆಲ್ಲಾ ಕುಳಿತಲ್ಲೇ ಅರಿಯಲು ಅನುಕೂಲಕರವಾಗುವ ವಾಹಿನಿಗಳಲ್ಲಿ ಹಲವಾರು ಜನ ವೀಕ್ಷಿಸುವುದು ಭವಿಷ್ಯ ಹೇಳುವವೆಂದು ಭೂತಗಳಂತೆ ಕೂರುವ ದಂಡ, ಪಿಂಡ, ಬ್ರಹ್ಮಾಂಡಗಳನ್ನು!

ಭವಿಷ್ಯವನ್ನು ಜಾತಕ, ಕಂಪ್ಯೂಟರ್, ನ್ಯೂಮರಾಲಜಿ, ಇತ್ಯಾದಿಗಳ ಮೂಲಕ ಹೇಳುವುದೇ ಅಡ್ಡೇಟಿನ ಮೇಲೆ ಗುಡ್ಡೇಟಿನಂತೆ. ಇನ್ನು ಯಾವ ಜಾತಕವನ್ನೂ ನೋಡದೆ, ಗ್ರಹಗಳ ಚಲನೆಯ ಆಧಾರದ ಮೇಲೆ ಇವರು ಹೇಳುವ ಶಾಸ್ತ್ರಗಳು ನಿಜವಾಗುತ್ತವೆ ಎಂದು ನಂಬುವುದು ಹಾಸ್ಯಾಸ್ಪದವಷ್ಟೆ. ಒಂದು ಮಾತಂತೂ ಸತ್ಯ. ಇವರ ವಾಗ್ವೈಖರಿ ಅಮೋಘ? ಗುರುವು ಶನಿಯ ಮನೆಗೆ ಹೋಗಿದ್ದಾನೆ. ಭರಣಿ ನಕ್ಷತ್ರ ಕಳೆದು ಕೃತ್ತಿಕೆಯು ಮೂಡಿ ಬಂದಿದ್ದಾಳೆ. ಆದ್ದರಿಂದ ಇಂದು ನೀವು ವಾಹನ ಚಲಿಸುವಾಗ ಅಥವಾ ನಡೆಯುವಾಗ ಎಚ್ಚರದಿಂದಿರಿ. ಇಲ್ಲವಾದರೆ ಅಪಾಯವಾಗುತ್ತದೆ. ಕನಿಷ್ಠಪಕ್ಷ ಎಡವುದೋ, ಮೊಳಕೈ ತಗುಲಿಸಿಕೊಳ್ಳುವುದೋ ಆಗಿಯೇ ಆಗುತ್ತದೆ? ಎನ್ನುತ್ತಾನೊಬ್ಬ ಜ್ಯೋತಿಷಿ. ಚಲಿಸುವಾಗ ಎಚ್ಚರವಿರದಿದ್ದರೆ ಗ್ರಹಗಳೆಲ್ಲಾ ಸ್ವಗೃಹದಲ್ಲಿದ್ದರೂ ಅಪಘಾತ ತಪ್ಪದು ಎಂದು ಎಳೆಯ ಮಗುವೂ ಹೇಳಬಲ್ಲದು.

ಇನ್ನು ಪ್ರಳಯದ ವಿಷಯ. ಅದಾರೋ ಜ್ಯೋತಿಷಿ ಡಿಸೆಂಬರ್ 2012ರಲ್ಲಿ ಪ್ರಳಯವಾಗುತ್ತದೆ ಎಂದುದನ್ನು ಇವರೆಲ್ಲಾ ತಮ್ಮ ಲಾಭಕ್ಕೆ ಬಳಸಿಕೊಳ್ಳುತ್ತಿದ್ದಾರೆ? ನಮ್ಮ ಮಾತು ಕೇಳಿ. ಐದು ವಿಧವಾದ ಎಣ್ಣೆಗಳನ್ನು ಬಳಸಿ, ಐದು ದೀಪಗಳನ್ನು ದೇವಸ್ಥಾನದಲ್ಲಿ ಇರಿಸಿ. ಆಗ ಪ್ರಳಯದ ಪರಿಣಾಮ ಕಡಿಮೆ ಆಗುತ್ತದೆ. ಹೆಚ್ಚು ಜನ ಹೀಗೆ ಮಾಡಿದರೆ ಪ್ರಳಯವನ್ನು ತಪ್ಪಿಸಲೂಬಹುದು? ಎಂದನೊಬ್ಬ ಜ್ಯೋತಿಷಿ. ಈ ಪ್ರಳಯವು ಯಾವುದೋ ಬಾಹ್ಯಾಕಾಶ ವಸ್ತುವು ಭೂಮಿಗೆ ಅಪ್ಪಳಿಸುವುದರಿಂದ ಉಂಟಾಗುತ್ತದೆ ಎಂದು ವಿಜ್ಞಾನಿಗಳು ಹೇಳಿದ್ದಾರೆಂದು ಪತ್ರಿಕೆಗಳು ಮತ್ತು ಇಂಟರ್‌ನೆಟ್ ಘೋಷಿಸಿವೆ. ಅದು ನಿಜವೆಂದೇ ನಂಬಿದರೆ, ಯಾವುದೋ ಅರಿಯದ ಬಾಹ್ಯಾಕಾಶ ನೌಕೆ ಎಳ್ಳೆಣ್ಣೆಯ ದೀಪದ ಕಮಟು ವಾಸನೆಗೋ, ಬುಡ್ಡಿ ದೀಪದ ಬತ್ತಿಯ ವಾಸನೆಗೋ ಹೆದರಿ ದಿಕ್ಕುತಪ್ಪಿ ಹೋಗುತ್ತದೆ ಎನ್ನುವುದು ಮೌಢ್ಯದ ಪರಮಾವಧಿ. ವೈಜ್ಞಾನಿಕವಾಗಿ ಯೋಚಿಸಿದರೂ, ಒಂದು ವೇಳೆ ಆ ಬಾಹ್ಯಾಕಾಶ ವಸ್ತುವು ಅಪ್ಪಳಿಸುವುದೇ ಆದರೆ ಯಾವ ಶಕ್ತಿಯೂ ಅದನ್ನು ತಡೆಯಲಾರದು. ನಾವೇ ಉಡಾಯಿಸಿದ್ದ ಸ್ಕೈಲ್ಯಾಬ್ ಅನ್ನು ನಾವೇ ನಿಯಂತ್ರಿಸಲಾಗದೆ ಅದರ ಚೂರುಗಳು ಸಮುದ್ರಕ್ಕೆ ಬಿದ್ದದ್ದು ತಿಳಿದ ಸಂಗತಿಯೇ. ಆಗ ಅದು ಯಾವುದೋ ಬಂದರಿಗೆ ಅಪ್ಪಳಿಸುತ್ತದೆ ಎಂದು ಆ ಬಂದರನ್ನು ತೆರವು ಮಾಡಿಸಿದ್ದರು, ಲೆಕ್ಕಾಚಾರ ತಪ್ಪಾಗಿ ಅದು ಸಮುದ್ರಕ್ಕೆ ಬಿತ್ತು. ಒಂದುವೇಳೆ ಯಾವುದಾದರೂ ಬಾಹ್ಯದ ವಸ್ತುವು ಭೂಮಿಯ ಪರಿಧಿಯನ್ನು

ಪ್ರವೇಶಿಸಿದರೆ ಈ ಪರಿಧಿಗೆ ಬರುವಾಗ ಉಂಟಾಗುವ ಘರ್ಷಣೆಯಿಂದ ಅದು ಚೂರುಚೂರಾಗುತ್ತದೆ ಮತ್ತು ಯಾವುದಾದರೂ ಚೂರು ಎಲ್ಲಿಗಾದರೂ ಅಪ್ಪಳಿಸಿದರೂ ಅಲ್ಲಿ ದೊಡ್ಡ ಕಂದಕವಾಗಬಹುದು ಅಷ್ಟೆ. ಅದರ ಹೊರತಾಗಿ ಇಡೀ ಭೂಮಿ ನಾಶವಾಗುತ್ತದೆ ಎನ್ನುವುದು ನಿರಾಧಾರ. ಕ್ರಿಸ್ತ ಹುಟ್ಟುವುದಕ್ಕಿಂತ ಮೂರು ಸಾವಿರ ವರ್ಷಗಳಷ್ಟು ಹಿಂದೆಯೂ ಪ್ರಳಯವಾಗುತ್ತದೆ ಎಂದಿದ್ದರು, ಇಂದಿಗೂ ಅನ್ನುತ್ತಿದ್ದಾರೆ; ಇದು ಜನರಿಗೆ ಆಗಾಗ್ಗೆ ಬಡಿಯುವ ಸಾಮೂಹಿಕ ಸಾಂಕ್ರಾಮಿಕ ಮನೋರೋಗವಷ್ಟೆ.

ಭೂಪ್ರಳಯವಾಗಬೇಕಾದರೆ ಹಲವು ಸಾಧ್ಯತೆಗಳಿವೆ. ಜಲಪ್ರಳಯವಾಗಬೇಕಾದರೆ ಸಮುದ್ರದ ನೀರಿನ ಮಟ್ಟ ಏರುತ್ತಾ ಸಾಗಿ ಹಿಮಾಲಯದಷ್ಟು ಎತ್ತರ, ಎಂದರೆ 29,002 ಅಡಿಗಳಷ್ಟು ಏರಬೇಕು. ಇದಕ್ಕೆ ಭೂಮಿಯೇ ಒಳಕ್ಕಿಳಿಯಬೇಕು ಅಥವಾ ಸಮುದ್ರದ ನೀರು ಹೆಚ್ಚಬೇಕು. ಭೂಮಿ ಕೆಳಕ್ಕಿಳಿಯಲು ಅದರ ಮೇಲೆ ಆ ಮಟ್ಟದ ಒತ್ತಡ ಎಷ್ಟೇ ಪಾಪಿಗಳು ಹುಟ್ಟಿದರೂ ಬೀಳುವುದಿಲ್ಲ. ಸಮುದ್ರದ ನೀರಿನ ಮಟ್ಟ ಹೆಚ್ಚಬೇಕಾದರೆ ಜಗದ ಹಿಮವೆಲ್ಲಾ ಕರಗಿ ನೀರಾಗಬೇಕು. ಅದು ಸಂಭವಿಸಬೇಕಾದರೆ ಭೂಮಿಯ ಶಾಖ ಹೆಚ್ಚಬೇಕು. ಹಾಗಾಗಬೇಕಾದರೆ ಇರುವ ಓಝೋನ್ ಪದರ ಹರಿದುಹೋಗಬೇಕು. ನಮ್ಮ ಹಸಿರುವಿರೋಧಿ ಕಾರ್ಯಗಳಿಂದ ಓಜೋನ್ ಪದರ ಚಿಂದಿಯಾಗಿ ಶಾಖ ಏರುವ ಸಾಧ್ಯತೆಗಳಿವೆ. ಆದರೆ ಈ ಶಾಖವು ಇಡೀ ಹಿಮವನ್ನು ಕರಗಿಸಿ ನೀರಾಗಿಸುವ ಮಟ್ಟ ತಲುಪಬೇಕಾದರೆ ನೂರಾರು ವರ್ಷಗಳು ಬೇಕು. ಆಗಲೂ, ಎತ್ತರದ ಜಾಗಗಳನ್ನು ಮುಳುಗಿಸುವ ಮಟ್ಟಕ್ಕೆ ನೀರು ಬರುವುದು, ಸತತವಾಗಿ ಸುನಾಮಿಗಳಾದರೆ ಮಾತ್ರ ಸಾಧ್ಯ. ಇಂತಹ ಪರಿಸ್ಥಿತಿಗಳು ಕೇವಲ ಬಾಂಡ್ ಚಿತ್ರಗಳಲ್ಲಿ ಉದ್ಭವಿಸಬಹುದೇ ವಿನಹ ನಿಜ ಜೀವನದಲ್ಲಲ್ಲ.

ಅಗ್ನಿಪ್ರಳಯವಾಗಬೇಕಾದರೆ ನಿಗಿನಿಗಿಸುವ ಸೂರ್ಯನು ಭೂಮಿಗೆ ಬಹಳ ಸಮೀಪ ಬರಬೇಕು. ಈಗ ಸೂರ್ಯನು ಮುಂಚಿನ ದಿನಗಳಿಗಿಂತಲೂ ಕೊಂಚ ಮುಂದೆ ಬಂದಿದ್ದಾನೆಂಬ ಸುದ್ದಿಯಿದೆ. ಅದೇ ನಿಜವೆಂದು ನಂಬಿದರೂ ಸೂರ್ಯನ ಬೆಳಕಿಗೆ ಜಗ ಸುಟ್ಟು ಕರಕಲಾಗುವ ಮಟ್ಟ ತಲುಪಲು ಕೆಲವು ಸಾವಿರ ವರ್ಷಗಳಾದರೂ ಬೇಕು. ಜಗತ್ತಿನ ನಾಶ ಅಣುಬಾಂಬ್ ಹಾಕಿದರೆ ಮಾತ್ರ ಶೀಘ್ರವಾಗಿ ನೆರವೇರುತ್ತದೆ. ಆದರೆ... ನೀರಿನಲ್ಲಿ ಮುಳುಗಿದವರ ಮೇಲೆ ಆ ಬಾಂಬ್‌ನ ಪರಿಣಾಮಗಳೂ ಕಡಿಮೆ. ಹೀಗಾಗಿ ಜಗತ್ತು ಸರ್ವನಾಶವಾಗುವುದು ಕೇವಲ ಕಾಲ್ಪನಿಕವಷ್ಟೆ. ಜಗತ್ತು ಹಾಳಾಗದಿರಬಹುದು, ಆದರೆ ಮನಸ್ಸು ಹಾಳಾಗುವುದು ಬಹಳ ಸುಲಭ. ಇಂತಹ ಸುಳ್ಳು ಭವಿಷ್ಯಕಾರರಿಂದ ಅದೆಷ್ಟು ಜನ ಸಾಲ ಮಾಡಿ ಎಣ್ಣೆ ದೀಪಗಳನ್ನು ಹಚ್ಚಿರುವರೋ ಏನೋ...!

ನಿಮ್ಮ ಭವಿಷ್ಯ ನೀವೇ ತಿಳಿದುಕೊಳ್ಳುವುದು ಬಹಳ ಸುಲಭ. ನಿಮ್ಮ ವರ್ತಮಾನವನ್ನು ಸರಿಯಾಗಿರಿಸಿಕೊಳ್ಳಿ, ಭವಿಷ್ಯ ತಾನಾಗಿಯೇ ರೂಪಿತವಾಗುತ್ತದೆ!

■ ವೈ–ಚಾರಿ